ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ. ಎಂ. ಎಫ್.ಸಿ., ನ್ಯಾಯಾಲಯ ಚನ್ನಪಟ್ಟಣ
ಚನ್ನಪಟ್ಟಣ.

**ಸಿ.ಸಿ. ಸಂಖ್ಯೆಃ 695/2022**

ಚಾಸಾಃ 2 ಫ್ರಾಸಾಃ1

| | | |
|---|---|---|
| ಹೆಸರು | : | ಪ್ರತಾಪ್ ಕೆ ಟಿ |
| ಗಂಡನ/ತಂದೆಯ ಹೆಸರು | : | ತಿಮ್ಮೇಗೌಡ |
| ವಯಸ್ಸು | : | 30 ವರ್ಷ |
| ಉದ್ಯೋಗ | : | ಪೋಲೀಸ್ ಪೇದೆ,<br>ಎಂ ಕೆ ದೊಡ್ಡಿ ಪೋಲಿಸ್ ಠಾಣೆ |
| ವಾಸ | : | ಎಂ ಕೆದೊಡ್ಡಿ. |

ದಿನಾಂಕ **07.01.2025** ರಂದು ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ

ನಾನು 2018 ರಿಂದ 2022 ರವರೆಗೆ ಅಕ್ಕೂರು ಪೊಲೀಸ್ ಠಾಣೆಯಲ್ಲಿ ಪೋಲಿಸ್ ಪೇದೆಯಾಗಿ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ 24.01.2022 ರಂದು ಚಾಸಾ1 ರವರ ಜೊತೆ ನಾನು ಮತ್ತು ಚಾಸಾ2 ರವರು ಸರಗೂರು, ಇಗ್ಗಲೂರು, ಗರಕಹಳ್ಳಿಗಳಲ್ಲಿ ಗಸ್ತು ಮಾಡಿ ರಾತ್ರಿ 11.30 ಗಂಟೆ ಸಮಯದಲ್ಲಿ ಸರಗೂರು-ನೇರಳೂರು ರಸ್ತೆಯಲ್ಲಿ ಗಸ್ತಿನಲ್ಲಿ ಇರಬೇಕಾದರೆ ಸರಗೂರು ಕಡೆಯಿಂದ ಒಂದು ಟ್ರಾಕ್ಟರ್ ಬರುತ್ತಿದ್ದು, ನಾನು ಅನುಮಾನದಿಂದ ಟ್ರಾಕ್ಟರ್ ಅನ್ನು ನಿಲ್ಲಿಸಲು ಪ್ರಯತ್ತಿಸಿದಾಗ ಅದರ ಚಾಲಕ ಟ್ರಾಕ್ಟರ್ ಅನ್ನು ನಿಲ್ಲಿಸದೇ ವೇಗವಾಗಿ ಚಾಲನೆ ಮಾಡಿಕೊಂಡು ಹೋಗಲು ಪ್ರಯತ್ನಿಸಿದ್ದು ನಾವು ಹಿಂಬಾಲಿಸಿ ವೈದನಾಥೇಶ್ವರ ದೇವಸ್ಥಾನದ ಬಳಿ ಹಿಡಿದು ನಿಲ್ಲಿಸಿರುತ್ತೇವೆ. ನಂತರ ಅವರ ಹೆಸರು ವಿಳಾಸವನ್ನು ತೆಗೆದುಕೊಂಡು ಟ್ರಾಕ್ಟರ್ ಅನ್ನು ಪರಿಶೀಲಿಸಿದಾಗ ಅದರಲ್ಲಿ ಮರಳು ತುಂಬಿದ್ದು, ಟ್ರಾಕ್ಟರ್ ನ ನೋಂದಣಿ ಸಂಖ್ಯೆ ಕೆಎ-51-ಟಿ-5937 ಟ್ರೇಲರ್ ನಂಬರ್ ಇರುವುದಿಲ್ಲ. ಚಾಲಕನನ್ನು ಸ್ಥಳದಲ್ಲಿ ವಿಚಾರಣೆ

ಮಾಡಿದಾಗ ಜಿ ಟಿ ದೊಡ್ಡಿಯಲ್ಲಿರುವ ಕಣ್ವ ನದಿ ದಂಡೆಯಿಂದ ಮರಳನ್ನು ತುಂಬಿಕೊಂಡು ಬಂದಿರುತ್ತೇನೆಂದು ತಿಳಿಸಿರುತ್ತಾನೆ. ಮರಳು ಸಾಗಾಣಿಕೆ ಮಾಡಲು ಯಾವುದಾರರೂ ಪರವಾನಿಗೆ ಇದೆಯೇ ಎಂದು ವಿಚಾರ ಮಾಡಿದ್ದು, ಆತ ಯಾವುದೇ ಪರವಾನಿಗೆ ಇಲ್ಲವೆಂದು ತಿಳಿಸಿರುತ್ತಾನೆ. ನಂತರ ಆರೋಪಿ ಹಾಗೂ ಟ್ರಾಕ್ಟರ್ ಅನ್ನು ಠಾಣೆಗೆ ಕರೆದುಕೊಂಡು ಬಂದು ಠಾಣಾಧಿಕಾರಿಯವರ ಮುಂದೆ ಹಾಜರುಪಡಿಸಿರುತ್ತೇವೆ.ಸಾಕ್ಷಿಯು ಆ ದಿನ ವಶಕ್ಕೆ ಪಡೆದ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯನ್ನು ನೋಡಿ ಗುರುತಿಸುತ್ತಾರೆ. ಟ್ರಾಕ್ಟರ್ ಮತ್ತು ಟ್ರ್ಯಾಲಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಕಡತದಲ್ಲಿರುವ ಟ್ರಾಕ್ಟರ್ ಮತ್ತು ಟ್ರ್ಯಾಲಿಯ ಭಾವಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ ಸಾಕ್ಷಿಯು ನ್ಯಾಯಾಲಯದ ಕಡತದಲ್ಲಿರುವ 4 ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ1 ರಿಂದ ನಿಪಿ-4 ಎಂದು ಗುರುತಿಸಲಾಯಿತು ಮತ್ತು ಅವುಗಳಿಗೆ ಸಂಬಂದಪಟ್ಟ ಭಾರತೀಯ ಸಾಕ್ಷ್ಯಾ ನಿಯಮ ಕಲಂ 65(ಬಿ) ರೀತ್ಯಾ ಪ್ರಮಾಣ ಪತ್ರವನ್ನು ನಿಪಿ5 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ವಕೀಲರಿಂದಃ</u>

ಆರೋಪಿತರ ಪರ ವಕೀಲರು ಸಮಯಾವಕಾಶ ಕೋರಿದ್ದು ಪಾಟೀಸವಾಲಿಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

(ವೆಂಕಟೇಶಪ್ಪ. ವಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.